ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಕಾರ್ಯಾಲಯ, ಹಾಸನ-573201.
ಕಛೇರಿ : 08172-267345, 265028, ನಿವಾಸ : 08172-268202, ಫ್ಯಾಕ್ಸ್ : 08172-265418
Website: www.hassan-nic.in E-Mail: deo.hassan@gmail.com

ನಂ: ಚುನಾವಣೆ(1) 73/2017-18 ದಿನಾಂಕ: 27/03/2018.

# -:: ಪತ್ರಿಕಾ ಪ್ರಕಟಣೆ ::-

ವಿಷಯ:- ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ-2018 ಸಂಬಂಧ ಮಾದರಿ ನೀತಿ ಸಂಹಿತೆ ಮತ್ತು ಚುನಾವಣಾ ಸಿದ್ದತೆಗಳ ಕುರಿತು.

********

ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ-2018 ರ ವೇಳಾಪಟ್ಟಿಯನ್ನು ದಿನಾಂಕ: 27/03/2018 ರಂದು ಪ್ರಕಟಿಸಲಾಗಿದ್ದು, ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ. ಹಾಸನ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರದ ಚುನಾವಣಾ ಅಧಿಸೂಚನೆಯನ್ನು ದಿನಾಂಕ: 17/04/2018 ರಂದು ಪ್ರಕಟಿಸಲಾಗುವುದು. ತತ್ಸಂಬಂಧವಾಗಿ ದಿನಾಂಕ: 27/03/2018 ರಿಂದಲೇ ಮಾದರಿ ನೀತಿ ಸಂಹಿತೆಯು ಜಿಲ್ಲಾದ್ಯಂತ ಜಾರಿಯಲ್ಲಿರುತ್ತದೆ.

| **Schedule for General Election to the Legislative Assembly of Karnataka, 2018 Poll Events** | **Schedule** |
|---|---|
| Date of Issue of Gazette Notification | 17.04.2018 (TUE) |
| Last Date of Nominations | 24.04.2018 (TUE) |
| Date for Scrutiny of Nominations | 25.04.2018 (WED) |
| Last Date for Withdrawal of candidatures | 27.04.2018 (FRI) |
| **Date of Poll** | **12.05.2018 (SAT)** |
| Date of Counting | 15.05.2018 (TUE) |
| Date before which election shall be completed | 18.05.2018 (FRI) |

ಜಿಲ್ಲೆಯ 7 ವಿಧಾನ ಸಭಾ ಕ್ಷೇತ್ರಗಳು ಅಸ್ತಿತ್ವದಲ್ಲಿದ್ದು, ಅವುಗಳ ಮತದಾನ ಕೇಂದ್ರಗಳ ಮತ್ತು ಮತದಾರರ ವಿವರಗಳು ಈ ರೀತಿ ಇವೆ:

| ಕ್ರ. ಸಂ. | ವಿಧಾನ ಸಭಾ ಕ್ಷೇತ್ರದ ಸಂಖ್ಯಾ ಮತ್ತು ಹೆಸರು | ಸ್ಥಾಪಿಸಿರುವ ಮತದಾನ ಕೇಂದ್ರಗಳ ಸಂಖ್ಯೆ | ಮತದಾರರು | | |
|---|---|---|---|---|---|
| | | | ಪುರುಷರು | ಮಹಿಳೆಯರು | ಒಟ್ಟು |
| 1. | 193-ಶ್ರವಣಬೆಳಗೊಳ | 271 | 99542 | 99239 | **198781** |
| 2. | 194-ಅರಸೀಕೆರೆ | 275 | 103152 | 101611 | **204763** |
| 3. | 195-ಬೇಲೂರು | 270 | 94707 | 91824 | **186531** |
| 4. | 196-ಹಾಸನ | 266 | 102701 | 103411 | **206112** |
| 5. | 197-ಹೊಳೆನರಸೀಪುರ | 317 | 104057 | 100960 | **205017** |
| 6. | 198-ಅರಕಲಗೂಡು | 285 | 108779 | 101235 | **210014** |
| 7. | 199-ಸಕಲೇಶಪುರ | 282 | 96972 | 96129 | **193101** |
| **ಜಿಲ್ಲೆಯ ಒಟ್ಟು ಮತಗಟ್ಟೆ ಮತ್ತು ಮತದಾರರ ಸಂಖ್ಯೆ** | | **1966** | **709910** | **694409** | **1404319** |

a) <u>ಮಾದರಿ ನೀತಿ ಸಂಹಿತೆ ಜಾರಿಗೆ ಜಿಲ್ಲಾ ಮತ್ತು ತಾಲ್ಲೂಕು, ಹೋಬಳಿ, ಮಟ್ಟದ ತಂಡ</u> :

ಮಾದರಿ ನೀತಿ ಸಂಹಿತೆಯನ್ನು ಜಿಲ್ಲಾದ್ಯಂತ ಪರಿಣಾಮಕಾರಿಯಾಗಿ ಜಾರಿಗೆ ತರಲು ಜಿಲ್ಲಾಮಟ್ಟದಲ್ಲಿ ಒಂದು ತಂಡ ಹಾಗೂ ಆಯಾ ತಾಲ್ಲೂಕು ಮಟ್ಟಗಳಲ್ಲಿ ತಾಲ್ಲೂಕುವಾರು ಹಾಗೂ ಹೋಬಳಿ ಮಟ್ಟದಲ್ಲಿ Flying squad/MCC ತಂಡಗಳನ್ನು ರಚಿಸಿದೆ. ಸಾಂಸ್ಕೃತಿಕ /ಕ್ರೀಡೆ / ಜಾತ್ರೆ/ ಉತ್ಸವ ಇತ್ಯಾದಿಗಳಿಗೆ ಸಹಾಯಕ ಚುನಾವಣಾಧಿಕಾರಿಗಳ ಮಟ್ಟದಲ್ಲೇ ಅನುಮತಿ ನೀಡಲು ಅವಕಾಶ ಕಲ್ಪಿಸಲಾಗಿದೆ.

ಜಿಲ್ಲೆಯಲ್ಲಿ ಸಾರ್ವಜನಿಕ ಸ್ಥಳಗಳಿಗೆ/ಆಸ್ತಿಗಳಿಗೆ ಯಾವುದೇ ರೀತಿಯಿಂದ ಹಾನಿಗೊಳಗಾಗದಂತೆ ಹಾಗೂ ನಾಶಪಡಿಸಿದಲ್ಲಿ ಚುನಾವಣಾ ಕಾಯ್ದೆ ಹಾಗೂ ಸಿಆರ್‌ಪಿಸಿ ಕಾಯ್ದೆಗಳನ್ವಯ ಶಿಸ್ತು ಕ್ರಮಕೈಗೊಳ್ಳಲಾಗುವುದು.

ಜಿಲ್ಲೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರಾಜಕೀಯ ಪಕ್ಷಗಳ ಬ್ಯಾನರ್, ಬಂಟಿಂಗ್ಸ್, ಚುನಾವಣಾ ಪ್ರಚಾರ ಸಾಮಾಗ್ರಿಗಳು ಇದ್ದಲ್ಲಿ ಅವುಗಳನ್ನು ಕೂಡಲೇ ತೆರವುಗೊಳಿಸಲು ಸೂಚನೆ ನೀಡಲಾಗಿದೆ. ಮಾದರಿ ನೀತಿ ಸಂಹಿತೆ ಜಾರಿಗೆ ಬರುವ ತಕ್ಷಣದಿಂದ ಸಾರ್ವಜನಿಕ ಸ್ಥಳಗಳ ವಿರೂಪಗೊಳಿಸುವ ಕಾಯ್ದೆ (Disfigurement Act) ಪ್ರಕಾರ ನಿಯಮಾವಳಿಗಳನ್ನು ಉಲ್ಲಂಘಿಸುವವರ ವಿರುದ್ಧ ಚುನಾವಣಾ ಕಾಯ್ದೆ ರೀತ್ಯ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

2018 ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಯ ಮಾದರಿ ನೀತಿ ಸಂಹಿತೆಯು ಜಾರಿಗೆ ಬಂದಿದ್ದು, ತಕ್ಷಣದಿಂದಲೇ ಜಿಲ್ಲೆಯಲ್ಲಿರುವ ಎಲ್ಲಾ ನಿಗಮ, ಮಂಡಳಿ, ನಗರ ಸ್ಥಳೀಯ ಸಂಸ್ಥೆಗಳು, ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಮತ್ತು ಅರೆ-ಸರ್ಕಾರಿ ಇಲಾಖೆಗಳ ಅಧೀನದಲ್ಲಿರುವ ವಾಹನಗಳನ್ನು ಹಾಗೂ ಜಿಲ್ಲೆಯ ಎಲ್ಲಾ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಕೆ.ಎಸ್.ಆರ್.ಟಿ.ಸಿ., ಕೆ.ಪಿ.ಟಿ.ಸಿ.ಎಲ್. ಮತ್ತು ಇತರೆ ನಿಗಮ ಮಂಡಳಿಗಳ ಪರಿವೀಕ್ಷಣಾ ಮಂದಿರ ಅಥವಾ ಅತಿಥಿ ಗೃಹಗಳನ್ನು ಸಂಬಂಧಪಟ್ಟ ತಾಲ್ಲೂಕು ದಂಡಾಧಿಕಾರಿಗಳ ವಶಕ್ಕೆ ಪಡೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

b) <u>ಅಕ್ರಮ ಹಣ ಸಾಗಾಣಿಕೆ ಮತ್ತು ವ್ಯವಹಾರವನ್ನು ಪತ್ತೆ ಹಚ್ಚುವ ತಂಡ</u>:

ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು, ಜಿಲ್ಲಾ ಮಟ್ಟದಲ್ಲಿ ಅಕ್ರಮ ಹಣ ಸಾಗಾಣಿಕೆ /ವ್ಯವಹಾರವನ್ನು ಪತ್ತೆ ಹಚ್ಚುವ ಸಂಬಂಧ (ILLEGAL MONEY TRANSACTION TRACKING TEAM) ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ. ಈ ತಂಡವು ಯಾವುದೇ ದಾಖಲೆಗಳು ಇಲ್ಲದೇ ಸಾಗಾಣಿಕೆ ಮಾಡುವ ಮೊತ್ತವನ್ನು ಚುನಾವಣಾ ಕಾಯ್ದೆಯಂತೆ ವಶ ಪಡಿಸಿಕೊಂಡು ನಿಯಮಾನುಸಾರ ಕಾನೂನು ರೀತ್ಯ ಕ್ರಮಕೈಗೊಳ್ಳಲಾಗುವುದು.

c) <u>**Sector Officer`s ಗಳ ತಂಡ**</u>:- ಪ್ರತಿ 10-12 ಮತಗಟ್ಟೆಗಳಿಗೆ ಒಬ್ಬರಂತೆ ಜಿಲ್ಲೆಯಾದ್ಯಂತ ಎಲ್ಲಾ ಮತಗಟ್ಟೆಗಳಿಗೆ ಒಟ್ಟು 198 ಸೆಕ್ಟರ್ ಅಧಿಕಾರಿಗಳನ್ನು ನೇಮಕಾತಿ ಮಾಡಿ ಅವರಿಗೆ ಮ್ಯಾಜಿಸ್ಟ್ರೇಟ್ ಅಧಿಕಾರ ಚಲಾಯಿಸಲು ಒಳಾಡಳಿತ ಇಲಾಖೆಯ ಅನುಮತಿ ಪಡೆದು, ಈ ತಂಡಗಳಿಗೆ ವಿಶೇಷ ಅಧಿಕಾರ ನೀಡಲಾಗುತ್ತದೆ.

d) **<u>ಕಣ್ಗಾವಲು ಪಡೆ</u>:-** ಜಿಲ್ಲಾ ಗಡಿ ಮತ್ತು ಆಯಕಟ್ಟಿನ ಪ್ರದೇಶಗಳಲ್ಲಿನ 15 ಪ್ರತಿ ಚೆಕ್‌ಪೋಸ್ಟ್‌ಗಳಲ್ಲಿಯೂ ಕಟ್ಟು-ನಿಟ್ಟಿನ ಎಚ್ಚರಿಕೆಯ ದೃಷ್ಟಿಯಿಂದ 19 ಕಣ್ಗಾವಲು ಪಡೆಯನ್ನು ರಚಿಸಲಾಗುತ್ತಿದ್ದು, ಈ ತಂಡಗಳು ಪ್ರತಿ ಚೆಕ್ ಪೋಸ್ಟ್‌ಗಳಲ್ಲೂ ಕಾರ್ಯನಿರ್ವಹಿಸುತ್ತದೆ.

e) **<u>ವೀಡಿಯೋ ವೀಕ್ಷಕರ ತಂಡ (Video Viewing Team)</u> :** ತಾಲ್ಲೂಕು ಮಟ್ಟದಲ್ಲಿ ಕರ್ತವ್ಯ ನಿರ್ವಹಿಸಲು ವೀಡಿಯೋ ವೀಕ್ಷಕ (Video Viewing Team) ತಂಡವನ್ನು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೂ 3 ಜನ ಅಧಿಕಾರಿಗಳಂತೆ ಹಾಗೂ ಆಲೂರು ತಾಲ್ಲೂಕಿಗೆ 2 ಜನರಂತೆ ಒಟ್ಟು 23 ಜನ ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ.

1. **<u>ದೂರು ನಿವಾರಣಾ ಹಾಗೂ ಚುನಾವಣಾ ಕಂಟ್ರೋಲ್ ರೂಂ ಸ್ಥಾಪನೆ :-</u>**

ಜಿಲ್ಲೆಯಲ್ಲಿ ಮತದಾರರ ಕುಂದು ಕೊರತೆ ಆಲಿಸಲು/ದೂರನ್ನು ಸ್ವೀಕರಿಸಲು/ಹಾಗೂ ಸಲಹೆ ಸೂಚನೆಗಳನ್ನು ನೀಡಲು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ದಿನದ 24x7 ಗಂಟೆಯೂ ಕೆಲಸ ನಿರ್ವಹಿಸಲು ಕಂಟ್ರೋಲ್ ರೂಂ ಸ್ಥಾಪಿಸಲಾಗಿದೆ. ಜಿಲ್ಲಾಧಿಕಾರಿಗಳ ಕಛೇರಿಯ ಹಾಗೂ ತಾಲ್ಲೂಕು ಮಟ್ಟದ ದೂರವಾಣಿಗಳ ಸಂಖ್ಯೆ ವಿವರಗಳು ಈ ಕೆಳಕಂಡಂತಿದೆ.

| ಕಛೇರಿ | ದೂರವಾಣಿ ಸಂಖ್ಯೆಗಳು |
|---|---|
| ಜಿಲ್ಲಾಧಿಕಾರಿಗಳ ಕಛೇರಿ ಚುನಾವಣಾ ಶಾಖೆ | 08172-265028 |
| ನಿಯಂತ್ರಣ ಕೊಠಡಿ | 1077 |
| ಉಪವಿಭಾಗಾಧಿಕಾರಿಗಳ ಕಛೇರಿ, ಹಾಸನ | 08172-268403 |
| ಉಪವಿಭಾಗಾಧಿಕಾರಿಗಳ ಕಛೇರಿ, ಸಕಲೇಶಪುರ | 08173-244003 |
| ತಾಲ್ಲೂಕು ಕಛೇರಿ, ಹಾಸನ. | 08172-268395/260395 |
| ತಾಲ್ಲೂಕು ಕಛೇರಿ, ಚನ್ನರಾಯಪಟ್ಟಣ | 08176-252235/252314 |
| ತಾಲ್ಲೂಕು ಕಛೇರಿ, ಅರಸೀಕೆರೆ | 08174-232270/234879 |
| ತಾಲ್ಲೂಕು ಕಛೇರಿ, ಹೊಳೆನರಸೀಪುರ | 08175-273261/272111 |
| ತಾಲ್ಲೂಕು ಕಛೇರಿ, ಸಕಲೇಶಪುರ | 08173-244004/243012 |
| ತಾಲ್ಲೂಕು ಕಛೇರಿ, ಬೇಲೂರು | 08177-222234/230800 |
| ತಾಲ್ಲೂಕು ಕಛೇರಿ, ಅರಕಲಗೂಡು | 08175-220246/221736 |
| ತಾಲ್ಲೂಕು ಕಛೇರಿ, ಆಲೂರು | 08170-218222/218422 |

ಜಿಲ್ಲೆಯಲ್ಲಿ ಈ ಹಿಂದಿನ ಚುನಾವಣೆಗಳು ಶಾಂತ ರೀತಿಯಲ್ಲಿ ನಡೆಯಲು ರಾಜಕೀಯ ಪಕ್ಷಗಳು ಮತ್ತು ಜನತೆ ಜಿಲ್ಲಾಡಳಿತದೊಂದಿಗೆ ಸಹಕರಿಸಿರುತ್ತಾರೆ. ಅದೇ ರೀತಿ ಈ ಚುನಾವಣೆಯನ್ನು ಶಾಂತಿ ಸುವ್ಯವಸ್ಥಿತ, ಪಾರದರ್ಶಕ ನ್ಯಾಯ ಸಮ್ಮತವಾಗಿ ನಡೆಸಲು ರಾಜಕೀಯ ಪಕ್ಷಗಳ ನಾಯಕರು, ಮತದಾರರು, ಸಾರ್ವಜನಿಕರು ಮತ್ತು ಮಾಧ್ಯಮ ಮಿತ್ರರು ಎಲ್ಲಾ ರೀತಿಯಲ್ಲಿ ಜಿಲ್ಲಾಡಳಿತಕ್ಕೆ ಸಹಕರಿಸುವಂತೆ ಕೋರಲಾಗಿದೆ.